CONSCIENTIA

## ನಮ್ಮ ಬಗ್ಗೆ ಮಾಹಿತಿ

**'ಕಾನ್ಷೆನ್ಷಿಯಾ'**ಎಂಬುದು ಒಂದು ಲ್ಯಾಟಿನ್ ಪದವಾಗಿದ್ದು, 'ಜ್ಞಾನ' ಎಂಬ ಅರ್ಥವನ್ನು ನೀಡುತ್ತದೆ.

ಕಾನ್ಷೆನ್ಷಿಯಾವು ಕಂಪನಿಗಳ ಸ್ಥಾಪನೆ, ಕಾರ್ಯಾರಂಭ, ವಿವಿಧ ಅನುಮೋದನೆಗಳನ್ನು ಪಡೆಯುವುದು ಹಾಗೂ ಕಾರ್ಯಾಚರಣೆಗಳನ್ನು ನಡೆಸುವಂತಹ ಎಲ್ಲಾ ಕಾರ್ಪೋರೇಟ್ ಅಗತ್ಯಗಳಿಗೆ ಪರಿಹಾರಗಳನ್ನು ಒದಗಿಸುವ ಏಕಮೇವ ತಾಣವಾಗಿದೆ. ಕಾನ್ಷೆನ್ಷಿಯಾವು ಕಾರ್ಪೋರೇಟ್ ಕಾನೂನು, ಸಲಹಾ ಸೇವೆ, ನಿಯಂತ್ರಣ ಮತ್ತು ಹಣಕಾಸು ಸೇವೆಗಳಲ್ಲಿ ವಿಶಿಷ್ಟತೆ ಪಡೆದುಕೊಂಡಿದೆ.

ಕಾನ್ಷೆನ್ಷಿಯಾವು ಭಾರತದಲ್ಲಿ ವ್ಯವಹಾರವನ್ನು ಆರಂಭಿಸಲು ಆಸಕ್ತಿ ಹೊಂದಿರುವ ಮತ್ತು ವ್ಯವಹಾರವನ್ನು ಸ್ಥಾಪಿಸಿರುವ ಉದ್ಯಮಿಗಳು ಮತ್ತು ಕಂಪನಿಗಳಿಗೆ ಕಾರ್ಪೋರೇಟ್ ಸೇವೆಗಳನ್ನು ಒದಗಿಸುತ್ತಿದೆ. ನಾವು ಭಾರತದಲ್ಲಿ ವ್ಯವಹಾರ ಆರಂಭಿಸುವ ಬಗ್ಗೆ ಸಲಹೆ ನೀಡುವುದರಿಂದ ಪ್ರಾರಂಭಿಸಿ ಕಂಪನಿಯೊಂದನ್ನು ಸ್ಥಾಪಿಸುವವರೆಗೆ ಸಮಗ್ರ ಪರಿಹಾರವನ್ನು ಒದಗಿಸುತ್ತೇವೆ.

ಕಾನ್ಷೆನ್ಷಿಯಾವು ಜಪಾನಿ ಸಂಸ್ಥೆಗಳಿಗೆ ಸೇವೆ ಒದಗಿಸಲು ಒಂದು ಪ್ರತ್ಯೇಕ ವಿಭಾಗವನ್ನು ಹೊಂದಿರುತ್ತದೆ. ಈ ವಿಭಾಗಕ್ಕೆ ಜಪಾನಿ ಪ್ರಜೆಯೊಬ್ಬರನ್ನು ನೇಮಿಸಲಾಗಿದೆ.

### ನಮ್ಮ ಗುರಿ ಮತ್ತು ದೃಷ್ಟಿ ಕೋನ

### ನಮ್ಮ ಗುರಿ

"ಕಾರ್ಪೋರೇಟ್ ಕಾನೂನು ಬೆಂಬಲ ಸೇವೆಗಳನ್ನು, ಕಾನೂನು ಪಾಲನೆಯ ನಿರ್ವಹಣಾ ಸೇವೆಗಳನ್ನು ಹಾಗೂ ನಿಯಂತ್ರಣ ಸೇವೆಗಳನ್ನು ಕಾರ್ಪೋರೇಟ್ ವಲಯಕ್ಕೆ ಒದಗಿಸುವುದು ಹಾಗೂ ಉತ್ತಮ ಕಾರ್ಪೋರೇಟ್ ಆಡಳಿತ ಮತ್ತು ಕಾನೂನು ಪಾಲನೆಯನ್ನು ಖಾತ್ರಿಪಡಿಸಿಕೊಳ್ಳುವುದು ಮತ್ತು ಈ ಮೂಲಕ ಪರಿಣಾಮಕಾರಿ ವ್ಯವಸ್ಥೆಗಳನ್ನು ಮತ್ತು ನಿಯಂತ್ರಣಗಳನ್ನು ಪರಿಚಯಿಸುವುದು".

CONSCIENTIA

## ನಮ್ಮ ದೃಷ್ಟಿಕೋನ

"ಭಾರತದಲ್ಲಿನ ಶಾಸನ/ನಿಯಂತ್ರಣ ಸಂಸ್ಥೆಗಳ ಉದ್ದೇಶಗಳು ಹಾಗೂ ಈ ಸಂಸ್ಥೆಗಳು ರಚಿಸಿರುವ ನಿಯಮಾವಳಿಗಳನ್ನು ಪಾಲನೆ ಮಾಡಲು ಕಾರ್ಪೋರೇಟ್ ವಲಯಕ್ಕೆ ಬೆಂಬಲ ನೀಡುವುದು."

ಕಾನ್ಷೆನ್ಷಿಯಾವು ತನ್ನ ಗ್ರಾಹಕರ ಅಗತ್ಯತೆಗೆ ಅನುಗುಣವಾಗಿ, ತನ್ನ ವೃತ್ತಿಪರ ಸೇವೆಗಳನ್ನು ಒದಗಿಸುತ್ತದೆ. ಈ ವಿಸ್ತೃತ ಸಮೂಹವು ತನ್ನಲ್ಲಿ ಈ ಕೆಳಗಿನಂತೆ ಎರಡು ವಿಭಾಗಗಳನ್ನು ಒಳಗೊಂಡಿದೆ:

**ಕಾನ್ಷೆನ್ಷಿಯಾ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ (ಸಿಸಿಪಿಎಲ್)** 2006ರಲ್ಲಿ ಸಮರ್ಪಿತ ವೃತ್ತಿಪರರರಿಂದ ಸ್ಥಾಪನೆಗೊಂಡಿತು. ಈ ವೃತ್ತಿಪರರು ಕಾರ್ಪೋರೇಟ್ ದೇಶೀಯ ಮತ್ತು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿನ ಕಾನೂನು ಪಾಲನೆ, ಕಾರ್ಯದರ್ಶಿ ಮಟ್ಟದ ವ್ಯವಹಾರ, ವಾಣಿಜ್ಯ ಮತ್ತು ನಿಯಂತ್ರಣ ಸೇವೆಗಳಲ್ಲಿ ಅನುಭವವನ್ನು ಹೊಂದಿದ್ದಾರೆ.

**ಕಾನ್ಷೆನ್ಷಿಯಾ ಲಾ ಅಸೋಸಿಯೇಟ್ಸ್ (ಸಿಎಲ್ಎ)** ಕಾನೂನು ಬೆಂಬಲ ಸೇವೆಗಳ ಸಮಗ್ರ ಪ್ರಾಯೋಜಕ ಕಾರ್ಯತಂತ್ರವನ್ನು ಕಕ್ಷಿದಾರರಿಗೆ ಒದಗಿಸುತ್ತದೆ. ಅರ್ಹ ವೃತ್ತಿಪರರರನ್ನು ಒಳಗೊಂಡ ತಂಡವು ಕಕ್ಷಿದಾರರಿಗೆ ಬೆಂಬಲ ನೀಡುತ್ತದೆ ಮತ್ತು ಅತಿಕಡಿಮೆ ಸಮಯಾವಧಿಯಲ್ಲಿ ಲೀಗಲ್ ಬ್ಯಾಕ್ ಆಫೀಸ್‌ನಂತೆ ಕೆಲಸ ಮಾಡುತ್ತದೆ. ನಾವು ಮೊಕದ್ದಮೆ ಮತ್ತು ಮೊಕದ್ದಮೆಗೆ ಹೊರತಾದ ಕ್ಷೇತ್ರಗಳೆರಡರಲ್ಲೂ ಕಾನೂನು ಸೇವೆಗಳನ್ನು ಒದಗಿಸುತ್ತೇವೆ ಮತ್ತು ಕಕ್ಷಿದಾರರಿಗೆ ಅವರ ಹಲವಾರು ವ್ಯವಹಾರ ಅಗತ್ಯಗಳಿಗಾಗಿ ಸೂಕ್ತವಾದ ಕಾನೂನು ಸಲಹಾ ಸೇವೆಗಳನ್ನು ಒದಗಿಸುತ್ತೇವೆ.

## ನಮ್ಮ ಸೇವೆಗಳ ಕೊಡುಗೆಗಳು

- ಕಾರ್ಪೊರೇಟ್ ವ್ಯವಹಾರ ಸಲಹೆ
- ಭಾರತದಲ್ಲಿ ಕಂಪನಿಯ ಸ್ಥಾಪನೆ ಬಗ್ಗೆ ಮಾಹಿತಿ
- ಕಾರ್ಪೊರೇಟ್ ಕಾನೂನು ಸಲಹೆ ಮತ್ತು ಬೆಂಬಲ ಸೇವೆಗಳು
- ಗುತ್ತಿಗೆಗಳು ಮತ್ತು ಒಪ್ಪಂದಗಳು

CONSCIENTIA

- ಕಾರ್ಪೊರೇಟ್ ಕಾರ್ಯದರ್ಶಿ ಮಟ್ಟದ ನಿಯಮ ಪಾಲನೆ
- ನಿರ್ದೇಶಕ ಮಂಡಳಿಗೆ ಸಂಬಂಧಿಸಿದ ಕೆಲಸ
- ಕಂಪನಿಗಳ ರಿಜಿಸ್ಟ್ರಾರರಿಗೆ ನಮೂನೆಗಳನ್ನು ಮತ್ತು ರಿಟರ್ನ್‌ಗಳನ್ನು ಫೈಲ್ ಮಾಡುವುದು
- ಶಾಸನಬದ್ಧ ರಿಜಿಸ್ಟರ್‌ಗಳು ಮತ್ತು ಮಿನ್ಯೂಟ್ಸ್ ಪುಸ್ತಕಗಳನ್ನು ಉಸ್ತುವಾರಿ ಮಾಡುವುದು
- 1956ರ ಕಂಪನಿಗಳ ಕಾಯ್ದೆಗನುಗುಣವಾಗಿ ನಿಯಮಗಳ ಪಾಲನೆ
- ಬ್ಯಾಂಕಿಂಗ್/ ಹಣಕಾಸು ಸೇವೆಗಳನ್ನು ಪಡೆಯುವಲ್ಲಿ ಮಾರ್ಗದರ್ಶನ ಸೇವೆ
- ಆರ್‌ಬಿಐ (ಭಾರತೀಯ ರಿಸರ್ವ್ ಬ್ಯಾಂಕ್) ಮತ್ತು ಫೆಮಾಗೆ(ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ) ಸಂಬಂಧಿಸಿದ ಸೇವೆಗಳು
- ಐಪಿಆರ್ (ಇಂಟೆಲೆಕ್ಚುವಲ್ ಪ್ರಾಪರ್ಟಿರೈಟ್ಸ್-ಬೌದ್ಧಿಕ ಸ್ವತ್ತಿನ ಹಕ್ಕುಗಳು)ಗೆ ಸಂಬಂಧಿಸಿದ ವಿಷಯಗಳು – ಟ್ರೇಡ್‌ಮಾರ್ಕ್‌ಗಳು ಮತ್ತು ಕಾಪಿರೈಟ್(ಹಕ್ಕು ಸ್ವಾಮ್ಯ) ನೋಂದಣಿ
- ಅಕೌಂಟಿಂಗ್ ಮತ್ತು ಪೇರೋಲ್ ಸೇವೆಗಳು
- ಶಾಸನ ಮತ್ತು ರೆಗ್ಯುಲೇಟರಿ ಸೇವೆಗಳು
- ವಿವಿಧ ಶಾಸನಗಳಿಗನುಗುಣವಾಗಿ ನೋಂದಣಿಗಳು
- ಕಾರ್ಮಿಕ ಕಾನೂನು ಪಾಲನೆಗಳು
- ಆರ್‌ಒಸಿ (ಕಂಪನಿಯ ರಿಜಿಸ್ಟ್ರಾರರು)/ಆರ್‌ಬಿಐ/ ಇತರ ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿರ್ವಹಿಸುವುದು
- ಕಾರ್ಪೊರೇಟ್ ರಚನೆಮತ್ತು ಪುನರ್‌ರಚನೆಗೆ ಸಂಬಂಧಿಸಿ ಸಲಹೆ ನೀಡುವುದು
- ಕಕ್ಷಿದಾರರ ಕಾನೂನು ವಿಭಾಗಗಳಿಗೆ ಆಂತರಿಕ ಬೆಂಬಲ
- ಕಾರ್ಪೊರೇಟ್ ತೆರಿಗೆ ಯೋಜನೆ ಮತ್ತು ನಿರ್ವಹಣೆಗೆ ಸಂಬಂಧಿಸಿ ಸಲಹೆ

ಕಾನ್ಷೆನ್ಷಿಯಾದ ತಂಡವು ಉನ್ನತ ವೃತ್ತಿಪರ ಗುಣಮಟ್ಟಗಳನ್ನು ವೈಯಕ್ತಿಕ ನಡವಳಿಕೆಯ ಜೊತೆ ಸಂಯೋಜಿಸುತ್ತದೆ ಹಾಗೂ ಸಮಗ್ರ ಕಾನೂನು ಬೆಂಬಲ ಸೇವೆಗಳನ್ನು ಕಕ್ಷಿದಾರರರಿಗೆ ಒದಗಿಸುವ ಗುರಿಯನ್ನು ಇಟ್ಟುಕೊಂಡಿದೆ. ನಾವು ಪೂರ್ಣ ಪ್ರಮಾಣದ ಕಾನೂನು ಸೇವೆಗಳನ್ನು ಒದಗಿಸುವುದಲ್ಲದೇ, ವ್ಯವಹಾರ ಮತ್ತು ಹಣಕಾಸಿಗೆ ಸಂಬಂಧಿಸಿದ ಎಲ್ಲಾ ರೀತಿಯ ಕಾನೂನಿನ ಆಯಾಮಗಳನ್ನು ನೋಡಿಕೊಳ್ಳುತ್ತೇವೆ. 2006ರಲ್ಲಿ ಸ್ಥಾಪನೆಗೊಂಡಂದಿನಿಂದ ಈ ಕಾನ್ಷೆನ್ಷಿಯಾ

CONSCIENTIA

ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ತನ್ನ ಕಕ್ಷಿದಾರರಿಗೆ ಸಮರ್ಪಿತ ವೃತ್ತಿಪರ ಸೇವೆಗಳನ್ನು ಒದಗಿಸುತ್ತಿದ್ದು ಬೃಹತ್ ಪ್ರಮಾಣದ ಕಕ್ಷಿದಾರರನ್ನು ಆಕರ್ಷಿಸಿದೆ. ಇದು ಭಾರತದ ಸಿಲಿಕಾನ್ ಸಿಟಿಯೆಂದೇ ಖ್ಯಾತಿ ಪಡೆದಿರುವ ಬೆಂಗಳೂರಿನಲ್ಲಿ ನೆಲೆಗೊಂಡಿದೆ.

**ನಮ್ಮ ಕಾರ್ಯಾಚರಣೆಗಳು**

ಪ್ರಸ್ತುತವಾಗಿ ಕಾನ್ಷನ್ಷಿಯಾ ಕಂಪನಿಯು ಬೆಂಗಳೂರು, ಚೆನ್ನೈ, ಹೈದ್ರಾಬಾದ್ ಮತ್ತು ಮಧುರೈಯಲ್ಲಿ ತನ್ನ ಕಛೇರಿಗಳನ್ನು ಹೊಂದಿದೆ. ಅತೀ ಶೀಘ್ರದಲ್ಲಿ ಅದು ತನ್ನ ಕಛೇರಿಗಳನ್ನು ದೆಹಲಿ ಮತ್ತು ಮುಂಬೈಯಲ್ಲಿ ಪ್ರಾರಂಭಿಸಲಿದೆ.

**ಆಡಳಿತ ತಂಡ**

ನಮ್ಮ ಆಡಳಿತ ತಂಡವು ಮಂಡಳಿಯು ಕಾನೂನು ಸೇವೆ, ವಾಣಿಜ್ಯ ಮತ್ತು ನಿಯಂತ್ರಣಾ ಸೇವೆಗಳಲ್ಲಿ ಅನುಭವವಿರುವ ಅರ್ಹ ವೃತ್ತಿಪರರನ್ನು ಹೊಂದಿದೆ

**ಕೆ ವಿ ಓಂಪ್ರಕಾಶ್, ಬಿಎಲ್, ಎಸಿಎಸ್, ಎಂಬಿಎ(ಫೈನಾನ್ಸ್)** – ಸಂಸ್ಥಾಪಕ ಸದಸ್ಯರು

ಇವರೊಬ್ಬ ಕಾರ್ಪೋರೇಟ್ ವಕೀಲರಾಗಿದ್ದು, ಭಾರತೀಯ ಕಂಪನಿ ಸೆಕ್ರೆಟರೀಸ್ ಸಂಸ್ಥೆಯ (ಐಸಿಎಸ್ಐ) ಸಹಸದಸ್ಯರಾಗಿದ್ದಾರಲ್ಲದೇ, ಪುಣೆಯ ಎಸ್ಐಎಮ್ಎಸ್‌ನಿಂದ ಬಿಸಿನೆಸ್ ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಅವರು ಕಳೆದ 1989ರಿಂದ ಕಾನೂನು ವೃತ್ತಿ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ತಮ್ಮ 24 ವರ್ಷಗಳಿಗಿಂತಲೂ ಹೆಚ್ಚಿನ ಅನುಭವವನ್ನು ಕಾರ್ಯರಂಗಕ್ಕೆ ತಂದಿದ್ದಾರೆ. ಹಾಗೆಯೇ ಇವರು ಕಾರ್ಪೋರೇಟ್ ಕಾನೂನು ಮತ್ತು ಸೆಕ್ರೆಟರಿಯಲ್, ಪಾಲನಾ ನಿರ್ವಹಣೆ, ವಾಣಿಜ್ಯ ಮತ್ತು ಅಪಾಯ ನಿರ್ವಹಣೆ, ಕಾರ್ಪೋರೇಟ್ ಆಡಳಿತ ನಿರ್ವಹಣೆ, ಸೆಕ್ಯೂರಿಟಿಗಳ ನಿರ್ವಹಣೆ, ಕಾರ್ಪೋರೇಟ್ ಹಣಕಾಸು ಮತ್ತು ಮರುರಚನೆ, ವಿದೇಶಿ ಸಹಭಾಗಿತ್ವ/ ಜಂಟಿ ಸಾಹಸ ಯೋಜನೆಯ ಗುತ್ತಿಗೆಗಳು, ಗ್ರಾಹಕ ಹಕ್ಕು, ಬೌದ್ದಿಕ ಸ್ವತ್ತಿನ ಹಕ್ಕು, ಪ್ರತಿನಿಧಿತ್ವ ಮತ್ತು ಸಂಧಾನ ಹಾಗೂ ರೆಗ್ಯುಲೇಟರಿ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು, ಬ್ಯಾಂಕ್‌ಗಳು, ಆರ್‌ಬಿಐ, ಜೊತೆ ವಿಸ್ತೃತ ಸಂಪರ್ಕ ಹಾಗೂ ಚರ್ಚೆ, ಆರ್‌ಓಸಿ, ಎಸ್‌ಟಿಪಿಐ, ಇಪಿಜೆಡ್ ಹಾಗೂ ಇತರ ಶಾಸನಬದ್ಧ ಪ್ರಾಧಿಕಾರಗಳ ಜೊತೆ ಮುಂದಾಳತ್ವ ಮತ್ತು ಸಂಧಾನ ಹಾಗೂ ಹಣಕಾಸು ಸಂಸ್ಥೆ, ಬ್ಯಾಂಕ್‌ಗಳು, ಆರ್‌ಬಿಐ, ಮತ್ತು ಇತರ ಅಧಿಕೃತ ಸಂಸ್ಥೆಗಳಂತಹ ನಿಯಂತ್ರಣಾ ಸಂಸ್ಥೆಗಳೊಂದಿಗೆ ವಿಸ್ತೃತ ಸಂಪರ್ಕ ಮತ್ತು ಮುಂತಾದ ವಿಭಾಗಗಳಲ್ಲಿ ಕೆಲಸ ನಿರ್ವಹಿಸಿ ಸಾಕಷ್ಟು ಅನುಭವವನ್ನು ಹೊಂದಿರುತ್ತಾರೆ.

CONSCIENTIA

**ಎಸ್‌ರಾಘವನ್ , ಬಿಕಾಂ, ಎಸಿಎಸ್ – ಸಂಸ್ಥಾಪಕ ಸದಸ್ಯರು**

ಇವರೊಬ್ಬ ಕಂಪನಿ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದು, ಭಾರತೀಯ ಕಂಪನಿ ಸೆಕ್ರೆಟರೀಸ್ ಸಂಸ್ಥೆಯ (ಐಸಿಎಸ್‌ಐ) ಸಹಸದಸ್ಯರಾಗಿದ್ದಾರೆ, ಹಾಗೆಯೇ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ವಾಣಿಜ್ಯ ಪದವಿಯನ್ನು ಕೂಡ ಇವರು ಪಡೆದಿರುತ್ತಾರೆ. ಇವರು 1989ರಿಂದೀಚೆಗೆ ವಿವಿಧ ಕ್ಷೇತ್ರಗಳಲ್ಲಿ ಸುಮಾರು 24 ವರ್ಷಕ್ಕಿಂತಲೂ ಅಧಿಕ ಕಾಲ ಕೆಲಸ ಮಾಡಿರುವಅನುಭವವನ್ನು ಹೊಂದಿರುತ್ತಾರೆ. ಇವರು ಡಿಜಿಟಲ್ ಇಕ್ವಿಪ್‌ಮೆಂಟ್, ಕಾಂಪ್ಯಾಕ್ ಕಂಪ್ಯೂಟರ್ ಮತ್ತು ಭಾರತದಲ್ಲಿರುವ ಹ್ಯಾವ್ಲೆಟ್ ಪ್ಯಾಕರ್ಡ್ ಕಂಪನಿಯಲ್ಲಿಯೂ ಕೆಲಸ ನಿರ್ವಹಿಸಿದ್ದಾರೆ. ಇವಿಷ್ಟೇ ಅಲ್ಲದೇ ಅವರು ಅಕೌಂಟಿಂಗ್ ನಿಯಮಗಳ ಪಾಲನೆ, ವರದಿಗಾರಿಕೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಿಸಿದ ಕ್ಷೇತ್ರಗಳು, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ ಮತ್ತು ಅವುಗಳ ಪಾಲನೆ, ವೆಚ್ಚದ ಲೆಕ್ಕ ಪರಿಶೋಧನೆ ಲೆಕ್ಕಾಚಾರ, ಕಾರ್ಪೋರೇಟ್ ಸೆಕ್ರೆಟರಿಯಲ್, ಪಾಲನೆಯ ನಿರ್ವಹಣೆ, ಕಾರ್ಪೋರೇಟ್ ಆಡಳಿತ ಕಾರ್ಪೋರೇಟ್ ಹಣಕಾಸು ಮತ್ತು ಪುನಾರಚನೆ, ವರ್ಗಾವಣೆ ದರ ನಿಗದಿ, ಸಾಲ ನಿಯಂತ್ರಣ ಮತ್ತು ವಸೂಲಾತಿಗಳ, ನಿರ್ವಹಣಾ ಕ್ಷೇತ್ರಗಳಲ್ಲೂ ಕೆಲಸ ಮಾಡಿರುವ ಸಾಕಷ್ಟು ಅನುಭವವನ್ನು ಹೊಂದಿರುತ್ತಾರೆ.